# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | (391) 353 |
| 2 | ಸದಸ್ಯರ ಹೆಸರು | ಶ್ರೀ ಹೆಚ್.ಎಂ.ರಮೇಶಗೌಡ (ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ದಿನಾಂಕ | 23.09.2020 |
| 4 | ಉತ್ತರಿಸುವ ಸಚಿವರ | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ ಎರಡು ವರ್ಷಗಳಿಂದ ರೈತರ ಎಷ್ಟು ಪೋಡಿ ಕಾರ್ಯ ಬಾಕಿ ಉಳಿದಿವೆ; (ಅಂಕಿ ಅಂಶ ಸಹಿತ ಮಾಹಿತಿ ನೀಡುವುದು) | ರಾಜ್ಯದಲ್ಲಿ ಸನ್ 2019-20 ನೇ ಸಾಲಿನಿಂದ ಈವರೆಗೆ ರೈತರ ಜಮೀನುಗಳಿಗೆ ಸಂಬಂಧಿಸಿದಂತೆ ವಿವಿಧ ಪೋಡಿ ಅಳತೆ ಕೋರಿ 1346853 ಅರ್ಜಿಗಳು ಸ್ವೀಕೃತವಾಗಿದ್ದು, ಹಿಂದಿನ ಬಾಕಿ ಅರ್ಜಿಗಳು ಸೇರಿದಂತೆ ಒಟ್ಟು 1745016 ಅರ್ಜಿಗಳ ಪೈಕಿ 1299553 ಅರ್ಜಿಗಳನ್ನು ವಿಲೇಗೊಳಿಸಲಾಗಿದ್ದು, 445463 ಬಾಕಿ ಇರುತ್ತವೆ.<br>**ರಾಜ್ಯದ್ಯಂತ ಸನ್ 2019-20 ನೇ ಸಾಲಿನಿಂದ ಈವರೆಗಿನ ಅವಧಿಯಲ್ಲಿ ಸಾಧಿಸಿರುವ ವಿವಿಧ ಪೋಡಿ ಪ್ರಕರಣಗಳ ಪ್ರಗತಿ ವಿವರ**<br>ಪ್ರಾರಂಭಿಕ ಶಿಲ್ಕು: **398163**; ಸ್ವೀಕೃತಿ: **1346853**; ಒಟ್ಟು: **1745016**; ವಿಲೇ: **1299553**; ಬಾಕಿ: **445463** |
| ಆ) | ಹಿಂದೆ ಕಂದಾಯ ಇಲಾಖೆ ಹಮ್ಮಿಕೊಂಡಿದ್ದ ಪೋಡಿ ಮೇಳದ ಫಲಿತಾಂಶವೇನು; ಪೋಡಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು; | ಕಂದಾಯ ಇಲಾಖೆಯು ಪೋಡಿ ಮೇಳ ಎಂಬ ಯಾವುದೇ ಕಾರ್ಯಕ್ರಮವನ್ನು ಜಾರಿಗೊಳಿಸಿರುವುದಿಲ್ಲ, ಆದರೆ 2015-16 ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದಂತೆ ರಾಜ್ಯದಲ್ಲಿ ದಿನಾಂಕ 14-09-2015 ರಿಂದ ರಾಜ್ಯದಲ್ಲಿರುವ 224 ವಿಧಾನಸಭಾ ಕ್ಷೇತ್ರಗಳ ಪೈಕಿ ಬೆಂಗಳೂರು ನಗರ ಜಿಲ್ಲೆ ಹಾಗೂ ರಾಜ್ಯದಲ್ಲಿರುವ 50 ನಗರ ಪ್ರದೇಶದ ವಿಧಾನ ಸಭಾ ಕ್ಷೇತ್ರಗಳನ್ನು ಹೊರತು ಪಡಿಸಿ, ಉಳಿದ 174 ವಿಧಾನ ಸಭಾ ಕ್ಷೇತ್ರಗಳಲ್ಲಿ "**ಪೋಡಿ ಮುಕ್ತ ಅಭಿಯಾನ**" ಯೋಜನೆಯನ್ನು ಪ್ರಾರಂಭಿಸಲಾಗಿದೆ<br><br>ಈ ಯೋಜನೆಯಲ್ಲಿ ಬಹುಮಾಲೀಕತ್ವದ ಖಾಸಗಿ/ಹಿಡುವಳಿ ಜಮೀನುಗಳನ್ನು ಅಳತೆಗೆ ಒಳಪಡಿಸಿ ಏಕಮಾಲೀಕತ್ವಕ್ಕೆ ಪರಿವರ್ತಿಸಲು ಉದ್ದೇಶಿಸಲಾಗಿದ್ದು, ಸಾರ್ವಜನಿಕರ ದೈನಂದಿನ ಕೆಲಸಗಳಿಗೆ ತೊಂದರೆಯಾಗದಂತೆ, ಲಭ್ಯವಿರುವ ಹೆಚ್ಚಿನ ಸರ್ಕಾರಿ ಮತ್ತು ಪರವಾನಗಿ ಭೂಮಾಪಕರನ್ನು ಬಳಸಿಕೊಂಡು ಅಳತೆ ಕಾರ್ಯ ಕೈಗೊಳ್ಳಲಾಗುತ್ತಿದೆ. ಭೂಮಾಪಕರ ಲಭ್ಯತೆಯ ಮೇರೆಗೆ ವಿಧಾನಸಭೆ ಕ್ಷೇತ್ರವಾರು ಹಂತ ಹಂತವಾಗಿ ಕನಿಷ್ಟ 10 ಗ್ರಾಮಗಳನ್ನು ಅಳತೆಗೆ ಆಯ್ಕೆ ಮಾಡಿಕೊಂಡು ಪೋಡಿ ಮುಕ್ತಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ |

**ಪೋಡಿ ಮುಕ್ತ ಗ್ರಾಮ ಅಭಿಯಾನ ಯೋಜನೆಯ ಒಟ್ಟು ಪ್ರಗತಿ ವಿವರ**

| ಒಟ್ಟು ವಿಧಾನ ಸಭಾ ಕ್ಷೇತ್ರಗಳು | ಅಳತೆಗೆ ಆಯ್ಕೆ ಮಾಡಿಕೊಂಡ ಗ್ರಾಮಗಳು | ಅಳತೆಗೆ ಪೂರ್ಣಗೊಂಡ ಗ್ರಾಮಗಳು | ದುರಸ್ತಿ ಪೂರ್ಣಗೊಂಡ ಗ್ರಾಮಗಳು | ಇಂದೀಕರಣ ಪೂರ್ಣಗೊಂಡ ಗ್ರಾಮಗಳು |
|---|---|---|---|---|
| 174 | 15,884 | 15,595 | 14,816 | 13,731 |

| ಅಳತೆ ಮಾಡಿರುವ ಬ್ಲಾಕಗಳ ಸಂ | ದುರಸ್ತಿ ಮಾಡಿರುವ ಬ್ಲಾಕಗಳ ಸಂ | ಪಹಣಿ ಇಂಡಿಕರಣ ವಾದ ಬ್ಲಾಕಗಳ ಸಂ |
|---|---|---|
| 20,96,989 | 20,42,054 | 1,959,257 |

| | | |
|---|---|---|
| ಇ) | ರಾಜ್ಯದಲ್ಲಿ ಈವರೆಗೆ ಎಷ್ಟು ಬಗರ್ ಹುಕುಂ ಅರ್ಜಿಗಳು ವಿಲೇವಾರಿ ಯಾಗಿವೆ; ಎಷ್ಟು ಅರ್ಜಿಗಳು ಬಾಕಿ ಉಳಿದಿವೆ; ಯಾವ ಕಾರಣಕ್ಕೆ ಬಾಕಿ ಉಳಿಸಿ ಕೊಳ್ಳಲಾಗಿದೆ; | ರಾಜ್ಯದಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 94-ಎ ಅಡಿಯಲ್ಲಿ ನಮೂನೆ-50, ಕಲಂ 94-ಬಿ ಅಡಿಯಲ್ಲಿ ನಮೂನೆ-53 ಹಾಗೂ ಕಲಂ 94-ಎ(4) ಅಡಿಯಲ್ಲಿ ನಮೂನೆ 57 ರಡಿ ಸ್ವೀಕೃತಿ, ವಿಲೇವಾರಿ ಹಾಗೂ ಬಾಕಿ ಇರುವ ಅರ್ಜಿಗಳ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.<br><br>ಪ್ರಸ್ತುತ ಕೋವಿಡ್-19 ಸೋಂಕಿನ ಹಿನ್ನೆಲೆಯಲ್ಲಿ ಸ್ಥಳ ತನಿಖೆಯನ್ನು ಕೈಗೊಂಡು ಪರಿಶೀಲಿಸಿ ಇತ್ಯರ್ಥಪಡಿಸಲು ಸಾಧ್ಯವಾಗದೇ ಇರುವುದರಿಂದ ಬಾಕಿ ಉಳಿದಿರುತ್ತವೆ. |
| ಈ) | ಬಗರ್ ಹುಕುಂ ಅರ್ಜಿಗಳ ವಿಲೇವಾರಿಗೆ ಸರ್ಕಾರ ಕೈ ಗೊಂಡಿರುವ ಕ್ರಮಗಳೇನು? (ತಾಲ್ಲೂಕುವಾರು ಬಗರ್ ಹುಕುಂ ಅರ್ಜಿ ವಿಲೇವಾರಿ ಮತ್ತು ಬಾಕಿ ಉಳಿದ ಅರ್ಜಿ ಗಳ ವಿವರ ನೀಡುವುದು) | ಕರ್ನಾಟಕ ಭೂಕಂದಾಯ ನಿಯಮಗಳು, 1966ರ ನಿಯಮ, 108 ರನ್ವಯ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗಳನ್ನು ವಿಧಾನಸಭಾ ಕ್ಷೇತ್ರವಾರು ರಚಿಸಲು ಅವಕಾಶ ಕಲ್ಪಿಸಲಾಗಿದೆ. ಅದರನ್ವಯ ರಾಜ್ಯದಲ್ಲಿ ಈಗಾಗಲೇ 113 ವಿಧಾನಸಭಾ ಕ್ಷೇತ್ರಗಳ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗಳನ್ನು ರಚಿಸಲಾಗಿದೆ. ಉಳಿದ ವಿಧಾನಸಭಾ ಕ್ಷೇತ್ರಗಳ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗಳನ್ನು ರಚಿಸಲು ಕ್ರಮ ವಹಿಸಲಾಗುತ್ತಿದೆ. ಬಾಕಿ ಇರುವ ಎಲ್ಲಾ ಅರ್ಜಿಗಳನ್ನು ಸಮಿತಿಯ ಮುಂದೆ ಮಂಡಿಸಿ ನಿಯಮಾನುಸಾರ ಕ್ರಮ ತೆಗೆದುಕೊಂಡು ತ್ವರಿತವಾಗಿ ಇತ್ಯರ್ಥಪಡಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗಿದೆ. |

**ಸಂಖ್ಯೆ: ಕಂಇ 127 ಎಸ್‌ಎಸ್‌ಸಿ 2020**

**(ಆರ್.ಅಶೋಕ)**

ಕಂದಾಯ ಸಚಿವರು